<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 250
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 06-12-2023
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೇಂದ್ರ ಸರ್ಕಾರದ ವಿತ್ತ ಮಂತ್ರಾಲಯದ ಆರ್ಥಿಕ ವ್ಯಹಾರಗಳ ಇಲಾಖೆ (Department of Financial Affairs) ಮುಖೇನ Viability Gap Fund & India Infrastructure Development Fund ಯೋಜನೆಗಳ ಅಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ, ಹಾಗಿದ್ದಲ್ಲಿ ಈ ಉಭಯ ಯೋಜನೆಗಳ ರೂಪ ರೇಷೆಗಳೇನು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ವಿತ್ತ ಮಂತ್ರಾಲಯದ ಆರ್ಥಿಕ ವ್ಯಹಾರಗಳ ಇಲಾಖೆ (Department of Financial Affairs) ಮುಖೇನ Viability Gap Fund ಯೋಜನೆಗಳ ಅಡಿಯಲ್ಲಿ ನಾಲ್ಕು (4) ರಸ್ತೆ ಯೋಜನೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಂಡು ಅನುಷ್ಠಾನಗೊಳಿಸಲಾಗಿದೆ.<br><br>Viability Gap Fund ಯೋಜನೆಗಳ ಅಡಿಯಲ್ಲಿನ ಯೋಜನೆಗಳ ಪ್ರಮುಖ ರೂಪರೇಷೆ ಈ ಕೆಳಗಿನಂತಿದೆ:<br><br>ಪಿಪಿಪಿ ಮಾದರಿಯಲ್ಲಿ ರಿಯಾಯಿತಿದಾರರು ಯೋಜನೆಗೆ ಹಣವನ್ನು ಹೂಡಿಕೆ ಮಾಡಲಿದ್ದು, ಅಂತಹ ಯೋಜನೆಯಿಂದ ಬರುವ ಆದಾಯವು (ಉದಾ: ರಸ್ತೆ ಯೋಜನೆಗಳಲ್ಲಿ ಟೋಲ್ ಸಂಗ್ರಹಣೆ) ಹೂಡಿಕೆಗಿಂತ ಕಡಿಮೆಯಿದ್ದು, ಯೋಜನೆಯು ಆರ್ಥಿಕವಾಗಿ ಕಾರ್ಯಸಿಂಧುವಾಗದಂತಂಹ ಸಂದರ್ಭದಲ್ಲಿ ಅಂತಹ ಯೋಜನೆಗಳನ್ನು ಕಾರ್ಯಸಿಂಧುವಾಗುವಂತೆ ಮಾಡಲು ಅಗತ್ಯವಿರುವ ಹಣಕಾಸಿನ ಬೆಂಬಲವನ್ನು ರಿಯಾಯಿತಿದಾರರಿಗೆ ಗ್ರ್ಯಾಂಟ್ ರೂಪದಲ್ಲಿ ನೀಡಲಾಗುವುದು.<br><br>ಈ ರೀತಿಯ ಯೋಜನೆಗಳಿಗೆ (20% ರಾಜ್ಯ ಸರ್ಕಾರ ಮತ್ತು 20% ಕೇಂದ್ರ ಸರ್ಕಾರ), ಉಳಿದ 60% ರಷ್ಟು ಮೊತ್ತವನ್ನು ರಿಯಾಯಿತಿದಾರರು ಭರಿಸಬೇಕಾಗಿರುತ್ತದೆ.<br><br>ಸದರಿ ಯೋಜನಾ ರಸ್ತೆಗಳನ್ನು ರಿಯಾಯಿತಿ ಕರಾರಿನನ್ವಯ ರಿಯಾಯಿತಿದಾರರೇ ನಿಗಧಿತ ಅವಧಿ ಮುಗಿಯುವವರೆಗೆ ರಸ್ತೆ ಕಾರ್ಯಚಾರಣೆ ಮತ್ತು ನಿರ್ವಹಣೆ ಕಾರ್ಯವನ್ನು ಮಾಡಬೇಕಾಗಿರುತ್ತದೆ.<br>ವಿವರವಾದ ರೂಪ ರೇಷೆಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ರಾಜ್ಯದಲ್ಲಿ ಉಭಯ ಯೋಜನೆಗಳಡಿಯಲ್ಲಿ ಖಾಸಗಿ ಸಹಭಾಗಿತ್ವ / ಪಾಲುದಾರಿಕೆಯಲ್ಲಿ ಇದುವರೆಗೂ ಕೈಗೊಂಡಿರುವ ಮತ್ತು ಕೈಗೊಳ್ಳಲು ಉದ್ದೇಶಿಸಲಾಗಿರುವ ಮೂಲಭೂತ ಸೌಕರ್ಯಗಳ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳ ಆಯ್ಕೆಗೆ ಅನುಸರಿಸಿರುವ ಮಾನದಂಡಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ರಾಜ್ಯದಲ್ಲಿ Viability Gap Fund ಅಡಿಯಲ್ಲಿ ನಾಲ್ಕು ರಸ್ತೆ ಯೋಜನೆಗಳನ್ನು ಕೈಗೊಂಡು ಅನುಷ್ಠಾನಗೊಳಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br><br>Viability Gap Fund ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳು ಪ್ರಸ್ತುತ ಯಾವುದು ಇರುವುದಿಲ್ಲ.<br><br>ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP-BOT/ DBFOT - VGF (Viability Gap Funding) -Toll ಆಧಾರದಡಿಯಲ್ಲಿ ಕೈಗೊಳ್ಳುವ ಯೋಜನೆಗಳ ಆಯ್ಕೆಗೆ ಅನುಸರಿಸಿರುವ ಮಾನದಂಡಗಳು ಈ ಕೆಳಕಂಡಂತಿದೆ : |

| | | |
|---|---|---|
| | | ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP-BOT/ DBFOT - VGF(Viability Gap Funding)-Toll ಆಧಾರದಡಿಯಲ್ಲಿ ಕೈಗೊಳ್ಳುವ ಯೋಜನೆಗಳು ಗರಿಷ್ಠ ಶೇಕಡ 40 ವಿಜಿಎಫ್ ಮೊತ್ತದೊಂದಿಗೆ ಆರ್ಥಿಕವಾಗಿ ಕಾರ್ಯಸಿಂಧುವಾದಲ್ಲಿ ಅಂತಹ ಯೋಜನೆಗಳನ್ನು ಮಾತ್ರ ವಿಜಿಎಫ್ ಮಾದರಿ ಯೋಜನೆಗಳಿಗೆ ಪರಿಗಣಿಸಿಬಹುದೆಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಶ್ರೀ.ಬಿ.ಕೆ.ಚತುರ್ವೇದಿ ವರದಿಯನ್ನು ಆಧರಿಸಿ ದಿನಾಂಕ: 05-11-2009 ರಂದು ಹೊರಡಿಸಿರುವ ಮೆಮೊರಾಂಡಮ್‌ನಲ್ಲಿ ತಿಳಿಸಲಾಗಿದೆ.<br><br>ನಿಗಮದಲ್ಲಿ ಕೈಗೊಂಡಿರುವ ನಾಲ್ಕು ರಸ್ತೆ ಯೋಜನೆಗಳನ್ನು ಸದರಿ ಮೆಮೊರಾಂಡಮ್ ಅನುಸಾರ ಆಯ್ಕೆ ಮಾಡಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗಿರುತ್ತದೆ. |
| ಇ | ರಾಜ್ಯದಲ್ಲಿ ಉಭಯ ಯೋಜನೆಗಳಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕೈಗೊಂಡಿರುವ ಕಾಮಗಾರಿಗಳು ಅನುಷ್ಠಾನ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ Viability Gap Funding ಯೋಜನೆಯಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಂಡಿರುವ ನಾಲ್ಕು ರಸ್ತೆ ಕಾಮಗಾರಿಗಳು ಪ್ರಸ್ತುತ ನಿರ್ಮಾಣ ಕಾಮಗಾರಿ ಪೂರ್ಣಗೊಂಡು, ಯೋಜನಾ ರಸ್ತೆಗಳು ಕಾರ್ಯಚಾರಣೆ ಮತ್ತು ನಿರ್ವಹಣಾ ಅವಧಿಯಲ್ಲಿದೆ. ಪೂರ್ಣ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |
| ಈ | ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಕಾಮಗಾರಿಗಳಿಗೆ ಇದುವರೆವಿಗೂ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಎಷ್ಟು? (ಕಾಮಗಾರಿವಾರು ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಕಾಮಗಾರಿಗಳಿಗೆ ಇದುವರೆವಿಗೂ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನದ ಯೋಜನಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |

ಸಂಖ್ಯೆ. ಲೋಇ E-337 ಇಎಪಿ 2023

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

**ಸತೀಶ ಜಾರಕಿಹೊಳಿ**
**ಲೋಕೋಪಯೋಗಿ ಸಚಿವರು**

ಅನುಬಂಧ-01

**Department of Financial Affairs ಮುಖೇನ Viability Gap Fund ಯೋಜನೆಗಳ ವಿವರವಾದ ರೂಪ ರೇಷೆಗಳು ಇಂತಿವೆ:**

- ಸರ್ಕಾರದ ಮೂಲ ಸೌಕರ್ಯ ಯೋಜನೆಗಳಲ್ಲಿ ಖಾಸಗಿ ಹೂಡಿಕೆಗಳನ್ನು ಆಕರ್ಷಿಸಲು ಕೇಂದ್ರ ಮತ್ತು ರಾಜ್ಯದ ಸರ್ಕಾರಗಳು ಸಾರ್ವಜನಿಕ-ಖಾಸಗಿ ಸಹಭಾಗಿತ್ವಕ್ಕೆ (PPPs) ಕಾರ್ಯಸಾಧ್ಯತೆಯ ಅಂತರ ನಿಧಿಯ (VGF) ಮೂಲಕ ಹಣಕಾಸಿನ ಬೆಂಬಲವನ್ನು VGF ಯೋಜನೆಗಳಲ್ಲಿ ವಿಸ್ತರಿಸುತ್ತದೆ.
- VGF ಕಾರ್ಯಸಾಧ್ಯತೆಯ ಗ್ಯಾಪ್ ಫಂಡ್ ಎಂದರೆ ಆರ್ಥಿಕವಾಗಿ ಸಮರ್ಥನೀಯ ಆದರೆ ಆರ್ಥಿಕವಾಗಿ ಕಾರ್ಯಸಾಧ್ಯತಾವಲ್ಲದ ಯೋಜನೆಗಳನ್ನು ಬೆಂಬಲಿಸುವ ಅನುದಾನ.
- ಹಣಕಾಸು ಸಚಿವಾಲಯವು ನಿರ್ವಹಿಸುವ ಯೋಜನೆಗಳಿಗೆ ಪ್ರತಿ ವರ್ಷ ಬಜೆಟ್‌ಲ್ಲಿ ಅವಕಾಶ ಕಲ್ಪಿಸಲಾಗಿದೆ.
- VGF ಅಡಿಯಲ್ಲಿ ಅಂತಹ ಅನುದಾನವನ್ನು ಖಾಸಗಿ ವಲಯದ ಕಂಪನಿಗಳಿಗೆ PPP ಯೋಜನೆಗಳಲ್ಲಿ ಭಾಗವಹಿಸುವಂತೆ ಆಕರ್ಷಿಸಲು ಬಂಡವಾಳವನ್ನು ಸಬ್ಸಿಡಿಯ ರೂಪದಲ್ಲಿ ಒದಗಿಸಲಾಗುತ್ತದೆ. ಇಲ್ಲವಾದರೆ ಅಂತಹ ಯೋಜನೆಗಳು ಆರ್ಥಿಕವಾಗಿ ಆಶಕ್ತವಾಗುತ್ತದೆ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಬರುವ ಯೋಜನೆಗಳನ್ನು ಬೆಂಬಲಿಸಲು VGF ಯೋಜನೆಯನ್ನು 2004 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- VGF ಬೆಂಬಲವನ್ನು ಒಟ್ಟಾರೆ ಯೋಜನಾ ಮೊತ್ತದ ಶೇಕಡ 40% ಕ್ಕೆ (ಕೇಂದ್ರ ಮತ್ತು ರಾಜ್ಯದ ಸರ್ಕಾರದ ಬೆಂಬಲ) ನಿರ್ಬಂಧಿಸಲಾಗುತ್ತದೆ.
- ಖಾಸಗಿ ವಲಯದ ಪ್ರಾಯೋಜಕರನ್ನು ಸ್ಪರ್ಧಾತ್ಮಕ ಬಿಡ್ಡಿಂಗ್ ಪ್ರಕ್ರಿಯೆ ಮೂಲಕ ಆಯ್ಕೆ ಮಾಡುವ ಮೂಲ ಸೌಕರ್ಯ ಯೋಜನೆಗಳಲ್ಲಿ ಕನಿಷ್ಟ VGF ನಮೂದಿಸುವ ಬಿಡ್‌ದಾರರಿಗೆ ರಿಯಾಯಿತಿ ಗುತ್ತಿಗೆಯನ್ನು ನೀಡಲಾಗುವುದು.
- VGF ಅನುದಾನವನ್ನು ನಿರ್ಮಾಣ ಹಂತದಲ್ಲಿಯೇ ವಿತರಿಸಲಾಗುವುದು ಆದರೆ ಖಾಸಗಿ ವಲಯದ ಡೆವೆಲಪರ್ ಯೋಜನೆಗೆ ಅಗತ್ಯವಾದ ಇಕ್ವಿಟಿ ಕೊಡುಗೆಯನ್ನು ವೆಚ್ಚಮಾಡಿದ ನಂತರ VGF ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಅನುಬಂಧ-02

<u>ಕರ್ನಾಟಕ ವಿಧಾನ ಸಭೆ</u>

**16ನೇ ವಿಧಾನಸಭೆ 2ನೇ ಅಧಿವೇಶನ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 265 (250)
ಮಾನ್ಯ ಸದಸ್ಯರ ಹೆಸರು : ಶ್ರೀ. ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ವಿಷಯ : Viability Gap Fund & India Infrastructure Development Fund

| ಕ್ರ.ಸಂ | ಯೋಜನೆ | ರಿಯಾಯತಿದಾರರು | ರಿಯಾಯಿತಿ ಕರಾರು ದಿನಾಂಕ | ಜಿಲ್ಲೆ | ಅಂದಾಜು ಯೋಜನಾ ಮೊತ್ತ (ರೂ.ಕೋಟಿಗಳಲ್ಲಿ) | ಯೋಜನಾ ರಸ್ತೆ ಉದ್ದ | ವಿಜಿಎಫ್ ಮೊತ್ತ (ರೂ.ಕೋಟಿಗಳಲ್ಲಿ) | | | ರಿಯಾಯಿತಿ ಅವಧಿ | ಇದುವರೆವಿಗೂ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನದ (ವಿಜಿಎಫ್) ಮೊತ್ತ | ಷರಾ |
|---|---|---|---|---|---|---|---|---|---|---|---|---|
| | | | | | | | ಕೇಂದ್ರ (*) | ರಾಜ್ಯ (**) | ಒಟ್ಟಾರೆ ಅನುಮೋದಿತ ವಿಜಿಎಫ್ ಮೊತ್ತ | | | |
| 1 | ಯಲಹಂಕದಿಂದ-ಆಂಧ್ರ ಪ್ರದೇಶ ಗಡಿ ವರೆಗೆ ಕಿ.ಮೀ 13+800 ರಿಂದ 89+417 ರವರೆಗೆ ರಾಜ್ಯ ಹೆದ್ದಾರಿ-09 ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ DBFOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಯಲಹಂಕ – ಎ.ಪಿ.ಬಾರ್ಡರ್ ಟೋಲ್ ವೇ ಪ್ರೈ.ಲಿ., ಬೆಂಗಳೂರು.. | 03-06-2015 | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮತ್ತು ಚಿಕ್ಕಬಳ್ಳಾಪುರ | 380.85 | 74.35 | 76.17 (20%) | 76.16 (20%) | 152.33 (40%) | 21 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 19 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | 75.43 | ಯೋಜನಾ ರಸ್ತೆಯನ್ನು ದಿನಾಂಕ : 05-03-2016 ರಂದು ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುತ್ತದೆ ಹಾಗೂ ದಿನಾಂಕ ; 19-09-2018 ರಂದು Provisional Commericial Operation date ಘೋಷಿಸಿಲಾಗಿದೆ ಮತ್ತು ದಿನಾಂಕ : 29-09-2018 ರಿಂದ ರಿಯಾಯಿತಿದಾರರ ವತಿಯಿಂದಲೇ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ. ಪ್ರಸ್ತುತ, ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ. ಕರಾರಿನಂತೆ 05-03-2039 ರಂದು ರಿಯಾಯಿತಿ ಅವಧಿಯು ಮುಕ್ತಾಯವಾಗಲಿದೆ. |
| 2 | ವಾಗ್ದಾರಿ-ರಿಬ್ಬನ್ ಪಲ್ಲಿ (ರಾಜ್ಯ ಹೆದ್ದಾರಿ -10) ರಸ್ತೆ ಅಭಿವೃದ್ಧಿ ಯೋಜನೆ ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ BOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಜಿ.ವಿ.ಆರ್ ಎಂ.ಪಿ ವಾಗ್ದಾರಿ-ರಿಬ್ಬನ್‌ಪಲ್ಲಿ ಟೋಲ್ ವೇ ಪ್ರೈ.ಲೀ., ಬೆಂಗಳೂರು. | 04-06-2010 | ಗುಲ್ಬರ್ಗಾ | 238.58 | 135.85 | 47.71 (20%) | 42.95 (18%) | 90.66 (38.00%) | 30 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 28 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | 47.71 | ಯೋಜನಾ ರಸ್ತೆಯನ್ನು ದಿನಾಂಕ : 03-12-2010 ರಂದು ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುತ್ತದೆ ಹಾಗೂ ದಿನಾಂಕ ; 18-08-2012 ರಂದು Provisional Commericial Operation date ಘೋಷಿಸಿಲಾಗಿದೆ ಮತ್ತು ದಿನಾಂಕ : 07-09-2012 ರಿಂದ ರಿಯಾಯಿತಿದಾರರ ವತಿಯಿಂದಲೇ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ. ಪ್ರಸ್ತುತ, ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ. ಕರಾರಿನಂತೆ 03-12-2040 ರಂದು ರಿಯಾಯಿತಿ ಅವಧಿಯು ಮುಕ್ತಾಯವಾಗಲಿದೆ. |
| 3 | ಧಾರವಾಡ-ಅಳ್ನಾವಾರ-ರಾಮನಗರ ವರೆಗೆ ರಸ್ತೆ ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ BOT-VGF (Toll) ಆಧಾರದ ರಸ್ತೆ | ಮೆ॥ ಜಿ.ವಿ.ಆರ್ ಎಂ.ಪಿ ಧಾರವಾಡ – ರಾಮನಗರ ಟೋಲ್ ವೇ ಪ್ರೈ.ಲೀ., ಬೆಂಗಳೂರು | 04-06-2010 | ಧಾರಾವಾಡ ಮತ್ತು ಬೆಳಗಾವಿ | 230.29 | 61.75 | 46.06 (20%) | 36.84 (16%) | 82.90 (36.00%) | 30 ವರ್ಷಗಳು (2 ವರ್ಷ ನಿರ್ಮಾಣ ಮತ್ತು 28 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | 44.86 | ಯೋಜನಾ ರಸ್ತೆಯನ್ನು ದಿನಾಂಕ : 03-12-2010 ರಂದು ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುತ್ತದೆ ಹಾಗೂ ದಿನಾಂಕ ; 27-08-2013 ರಂದು Provisional Commericial Operation date ಘೋಷಿಸಿಲಾಗಿದೆ ಮತ್ತು ದಿನಾಂಕ : 12-12-2013 ರಿಂದ ರಿಯಾಯಿತಿದಾರರ ವತಿಯಿಂದಲೇ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ. ಪ್ರಸ್ತುತ, ಯೋಜನಾ ರಸ್ತೆಯು ಕಾರ್ಯಚಾರಣೆ |

| ಕ್ರ.ಸಂ | ಯೋಜನೆ | ರಿಯಾಯತಿದಾರರು | ರಿಯಾಯಿತಿ ಕರಾರು ದಿನಾಂಕ | ಜಿಲ್ಲೆ | ಅಂದಾಜು ಯೋಜನಾ ಮೊತ್ತ (ರೂ.ಕೋಟಿಗಳಲ್ಲಿ) | ಯೋಜನಾ ರಸ್ತೆ ಉದ್ದ | ವಿಜಿಎಫ್ ಮೊತ್ತ (ರೂ.ಕೋಟಿಗಳಲ್ಲಿ) | | | ರಿಯಾಯಿತಿ ಅವಧಿ | ಇದುವರೆವಿಗೂ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನದ (ವಿಜಿಎಫ್) ಮೊತ್ತ | ಷರಾ |
|---|---|---|---|---|---|---|---|---|---|---|---|---|
| | | | | | | | ಕೇಂದ್ರ (*) | ರಾಜ್ಯ (**) | ಒಟ್ಟಾರೆ ಅನುಮೋದಿತ ವಿಜಿಎಫ್ ಮೊತ್ತ | | | |
| | | | | | | | | | | | | ಮತ್ತು ನಿರ್ವಹಣೆ ಅವಧಿಯಲ್ಲಿದೆ. ಕರಾರಿನಂತೆ 03-12-2040 ರಂದು ರಿಯಾಯಿತಿ ಅವಧಿಯು ಮುಕ್ತಾಯವಾಗಲಿದೆ. |
| 4 | ಗಿಣಿಗೆರ-ಗಂಗಾವತಿ-ಸಿಂಧನೂರು ವರೆಗೆ ರಾಜ್ಯ ಹೆದ್ದಾರಿ-23ರ ವರೆಗೆ ರಸ್ತೆ ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ DBFOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಸಿಂಧನೂರು ಗಂಗಾವತಿ ಟೋಲ್ ವೇ ಪ್ರೈ.ಲೀ., ಹೈದಾರಬಾದ್. | 24-08-2012 | ಕೊಪ್ಪಳ ಮತ್ತು ರಾಯಚೂರು | 190.16 | 83.00 | 4.59 (2.41%) | – | 4.59 (2.41%) | 24 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 22 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | 4.59 | ಯೋಜನಾ ರಸ್ತೆಯನ್ನು ದಿನಾಂಕ : 09-01-2014 ರಂದು ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುತ್ತದೆ ಹಾಗೂ ದಿನಾಂಕ ; 07-09-2016 ರಂದು Provisional Commercial Operation date ಘೋಷಿಸಿಲಾಗಿದೆ ಮತ್ತು ದಿನಾಂಕ : 27-09-2015 ರಿಂದ ರಿಯಾಯಿತಿದಾರರ ವತಿಯಿಂದಲೇ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ. ಪ್ರಸ್ತುತ, ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ. ಕರಾರಿನಂತೆ **09-01-2038** ರಂದು ರಿಯಾಯಿತಿ ಅವಧಿಯು ಮುಕ್ತಾಯವಾಗಲಿದೆ. |
| | | | | ಒಟ್ಟು ; | **1039.88** | **354.95** | **174.53** | **155.95** | **330.48** | | **172.59** | |

* ಒಟ್ಟಾರೆ ಯೋಜನಾ ಮೊತ್ತದಲ್ಲಿ ಶೇಕಡವಾರು ರಷ್ಟು ಕೇಂದ್ರ ಪಾಲು

** ಶೇಕಡವಾರು ರಷ್ಟು ರಾಜ್ಯ ಸರ್ಕಾರದ ಪಾಲು